**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

02.01.2026 13.10 hrs

**********

**ಮುಖ್ಯಾಂಶಗಳು**

1. ದೇಶವಾಸಿಗಳ ಹೊಸ ವರ್ಷದ ಸಂಕಲ್ಪಗಳು ದೃಢನಿಶ್ಚಯ, ಇಚ್ಛಾಶಕ್ತಿಯಿಂದ ಈಡೇರಲಿ; ಪ್ರಧಾನಿ ನರೇಂದ್ರ ಮೋದಿ ಆಶಯ
2. ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ತಮಿಳುನಾಡು ಪ್ರವಾಸ; ಇಂದು ರಾಮ್‌ನಾಥ್ ಗೋಯೆಂಕಾ ಸಾಹಿತ್ಯ ಸಮ್ಮಾನ್ ಸಮಾರಂಭದಲ್ಲಿ ಭಾಗಿ
3. ನವದೆಹಲಿಯಲ್ಲಿ ನಾಳೆ ಭಗವಾನ್ ಬುದ್ಧರ ಪವಿತ್ರ ಪಿಪ್ರಹ್ವಾ ಅವಶೇಷಗಳ ಅಂತಾರಾಷ್ಟ್ರೀಯ ಪ್ರದರ್ಶನ; ಪ್ರಧಾನಿ ಉದ್ಘಾಟನೆ
4. ಇದೇ ೪ ರಿಂದ ೧೦ ರವರೆಗೆ ಚೆನ್ನೈ ಬಂದರಿನಲ್ಲಿ ೧೧ನೇ ಭಾರತ ಅಂತಾರಾಷ್ಟ್ರೀಯ ಯುವ ನೌಕಾಯಾನ ಪಂದ್ಯಾವಳಿ

*********

ದೇಶದ ಎಲ್ಲಾ ನಾಗರಿಕರ ಹೊಸ ವರ್ಷದ ಸಂಕಲ್ಪಗಳು ದೃಢನಿಶ್ಚಯ, ಇಚ್ಛಾಶಕ್ತಿಯಿಂದ ಯಶಸ್ವಿಯಾಗಿ ಈಡೇರಲಿ ಎಂದು ಪ್ರಧಾನಿ ನರೇಂದ್ರ ಮೋದಿ ಆಶಿಸಿದ್ದಾರೆ. ಸಾಮಾಜಿಕ ಮಾಧ್ಯಮದಲ್ಲಿಂದು ಸ್ಫೂರ್ತಿದಾಯಕ ಸಂದೇಶ ಹಂಚಿಕೊಂಡಿರುವ ಅವರು, ಹೊಸ ವರ್ಷ ಮುಂದುವರೆದಂತೆ ಜನರು ದೃಢನಿಶ್ಚಯ, ಉದ್ದೇಶದ ಸ್ಪಷ್ಟತೆ ಮತ್ತು ಆತ್ಮವಿಶ್ವಾಸದಿಂದ ಜೀವನದಲ್ಲಿ ಮುಂದುವರಿಯಲು ಪ್ರೋತ್ಸಾಹಿಸಿದ್ದಾರೆ. ಸಂಸ್ಕೃತ ಶ್ಲೋಕವೊಂದನ್ನು ಹಂಚಿಕೊಂಡಿರುವ ಪ್ರಧಾನಿ, ದೃಢಸಂಕಲ್ಪ ಮಾಡಿ, ಮನಸ್ಸನ್ನು ಪಶ್ಚಾತ್ತಾಪದಿಂದ ಮುಕ್ತಗೊಳಿಸಿ, ಜಾಗೃತ ಮನಸ್ಸಿನೊಂದಿಗೆ ಸಮೃದ್ಧಿಯ ಹಾದಿಯಲ್ಲಿ ಮುನ್ನಡೆದಲ್ಲಿ ಯಶಸ್ಸು ಖಚಿತ ಎಂದಿದ್ದಾರೆ. ಸಂಸ್ಕೃತ ಚಿಂತನೆಯಿಂದ ಸೆಳೆಯುವ ಮೂಲಕ, ಪ್ರಧಾನಿ ಮತ್ತೊಮ್ಮೆ ಸಮಕಾಲೀನ ಆಕಾಂಕ್ಷೆಗಳನ್ನು ಭಾರತದ ತಾತ್ವಿಕ ಪರಂಪರೆಯೊಂದಿಗೆ ಸಂಪರ್ಕಿಸಲು ಪ್ರಯತ್ನಿಸಿದ್ದು, ಆಂತರಿಕ ಶಕ್ತಿ ಮತ್ತು ಸ್ಪಷ್ಟತೆ ಯಶಸ್ಸಿಗೆ ಅಡಿಪಾಯವಾಗಿದೆ ಎಂದು ಒತ್ತಿ ಹೇಳಿದ್ದಾರೆ.

*********

ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರು ಇಂದಿನಿಂದ ಎರಡು ದಿನಗಳ ತಮಿಳುನಾಡು ಪ್ರವಾಸ ಕೈಗೊಂಡಿದ್ದಾರೆ. ಚೆನ್ನೈ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಅವರನ್ನು ಇಂದು ಕೇಂದ್ರ ಸಚಿವ ಡಾ.ಎಲ್.ಮುರುಗನ್, ತಮಿಳುನಾಡು ಉಪಮುಖ್ಯಮಂತ್ರಿ ಉದಯ ನಿಧಿ ಸ್ಟಾಲಿನ್ ಸೇರಿದಂತೆ ಗಣ್ಯರು ಆತ್ಮೀಯವಾಗಿ ಬರಮಾಡಿಕೊಂಡರು. ಇದೇ ವೇಳೆ, ಉಪರಾಷ್ಟ್ರಪತಿಗಳಿಗೆ ಗೌರವ ರಕ್ಷೆ ನೀಡಲಾಯಿತು. ಪ್ರವಾಸದ ಭಾಗವಾಗಿ ಉಪರಾಷ್ಟ್ರಪತಿ, ಚೆನ್ನೈ ಮತ್ತು ವೆಲ್ಲೂರಿನಲ್ಲಿ ವಿವಿಧ

ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಚೆನ್ನೈನಲ್ಲಿರುವ ಡಾ.ಎಂ.ಜಿ.ಆರ್. ಶೈಕ್ಷಣಿಕ ಮತ್ತು ಸಂಶೋಧನಾ ಸಂಸ್ಥೆ ವಿಶ್ವವಿದ್ಯಾಲಯದ ಘಟಿಕೋತ್ಸವ ಸಮಾರಂಭದಲ್ಲಿ ಉಪರಾಷ್ಟ್ರಪತಿ ಪಾಲ್ಗೊಂಡು, ಭಾಷಣ ಮಾಡಲಿದ್ದಾರೆ. ಸಮಾರಂಭದಲ್ಲಿ ಪದವೀಧರರಿಗೆ ಪ್ರಮಾಣಪತ್ರಗಳನ್ನು ನೀಡಲಾಗುವುದು. ನಂತರ ಉಪರಾಷ್ಟ್ರಪತಿಗಳು ನಗರದಲ್ಲಿ ನಡೆಯುವ ರಾಮ್ ನಾಥ್ ಗೋಯೆಂಕಾ ಸಾಹಿತ್ಯ ಸಮ್ಮಾನ್ ಸಮಾರಂಭದಲ್ಲಿ ಹಾಗೂ ಕಲೈವಾನರ್ ಅರಂಗಂನಲ್ಲಿ ಸಾರ್ವಜನಿಕ ಸ್ವಾಗತ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ಇದರ ಜೊತೆಗೆ ಅವರು, ತಮಿಳುನಾಡು ರಾಜ್ಯಪಾಲರು ಚೆನ್ನೈ ಲೋಕ ಭವನದಲ್ಲಿ ಆಯೋಜಿಸಿರುವ ಸ್ವಾಗತ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ನಾಳೆ ಉಪರಷ್ಟ್ರಪತಿ, ವೆಲ್ಲೂರಿನಲ್ಲಿ ನಡೆಯುವ ಸಮಾರಂಭವೊಂದರಲ್ಲಿ ಭಾಗವಹಿಸಲಿದ್ದು, ಚೆನ್ನೈನಲ್ಲಿ ನಡೆಯುವ ೯ನೇ ಸಿದ್ಧ ದಿನಾಚರಣೆಯಲ್ಲಿ ಭಾಗವಹಿಸಲಿದ್ದಾರೆ.

*********

ನವದೆಹಲಿಯ ರಾಯ್ ಪಿಥೋರಾ ಸಾಂಸ್ಕೃತಿಕ ಸಂಕೀರ್ಣದಲ್ಲಿ ನಾಳೆ ನಡೆಯಲಿರುವ ಭಗವಾನ್ ಬುದ್ಧರ ಪವಿತ್ರ ಪಿಪ್ರಹ್ವಾ ಅವಶೇಷಗಳ ಅಂತಾರಾಷ್ಟ್ರೀಯ ಪ್ರದರ್ಶನವನ್ನು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಲಿದ್ದಾರೆ. ಈ ಪ್ರದರ್ಶನವು ನವದೆಹಲಿಯ ರಾಷ್ಟ್ರೀಯ ವಸ್ತುಸಂಗ್ರಹಾಲಯ ಮತ್ತು ಕೋಲ್ಕತ್ತಾದ ಭಾರತೀಯ ವಸ್ತುಸಂಗ್ರಹಾಲಯದ ಸಂಗ್ರಹಗಳಲ್ಲಿ ಸಂರಕ್ಷಿಸಲಾಗಿರುವ ಪಿಪ್ರಹ್ವಾ ಅಧಿಕೃತ ಅವಶೇಷಗಳು ಮತ್ತು ಪುರಾತತ್ವ ವಸ್ತುಗಳನ್ನು ಒಂದು ಶತಮಾನಕ್ಕೂ ಹೆಚ್ಚು ಕಾಲದ ನಂತರ ಮೊದಲ ಬಾರಿಗೆ, ಒಂದೆಡೆ ಒಟ್ಟುಗೂಡಿಸುತ್ತದೆ. ೧೮೯೮ ರಲ್ಲಿ ಪತ್ತೆಯಾದ ಪಿಪ್ರಹ್ವಾ ಅವಶೇಷಗಳು ಆರಂಭಿಕ ಬೌದ್ಧಧರ್ಮದ ಪುರಾತತ್ವ ಅಧ್ಯಯನದಲ್ಲಿ ಕೇಂದ್ರ ಸ್ಥಾನವನ್ನು ಹೊಂದಿವೆ ಎಂದು ಪ್ರಧಾನ ಮಂತ್ರಿ ಕಚೇರಿ ತಿಳಿಸಿದೆ. ಇವು ಭಗವಾನ್ ಬುದ್ಧನಿಗೆ ನೇರವಾಗಿ ಸಂಬಂಧಿಸಿದ ಐತಿಹಾಸಿಕವಾಗಿ ಮಹತ್ವದ ಅವಶೇಷಗಳಲ್ಲಿ ಸೇರಿವೆ. ಪುರಾತತ್ವ ಶಾಸ್ತ್ರದ ಪುರಾವೆಗಳು ಪಿಪ್ರಹ್ವಾ ಸ್ಥಳವನ್ನು ಪ್ರಾಚೀನ ಕಪಿಲವಸ್ತುವಿನೊಂದಿಗೆ ಸಂಯೋಜಿಸುತ್ತವೆ. ಇದನ್ನು ಭಗವಾನ್ ಬುದ್ಧನು ವೈರಾಗ್ಯ ತಾಳುವ ಮೊದಲು ತನ್ನ ಆರಂಭಿಕ ಜೀವನವನ್ನು ಕಳೆದ ಸ್ಥಳವೆಂದು ಗುರುತಿಸಲಾಗಿದೆ. ಬೌದ್ಧ ಬೋಧನೆಗಳೊಂದಿಗೆ ಭಾರತೀಯ ನಾಗರಿಕತೆಯ ಸಂಪರ್ಕಗಳನ್ನು ಮತ್ತು ಆಧ್ಯಾತ್ಮಿಕ, ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸಲು ಸರ್ಕಾರದ ಪ್ರಯತ್ನಗಳನ್ನು ಈ ಪ್ರದರ್ಶನ ಒತ್ತಿಹೇಳುತ್ತದೆ.

*********

ಮಹಾರಾಷ್ಟ್ರದ ಪಾಲ್ಘರ್‌ನಲ್ಲಿ ವಿರಾರ್ ಮತ್ತು ಬೋಯಿಸರ್ ಅನ್ನು ಸಂಪರ್ಕಿಸುವ ಸುಮಾರು ೧.೫ ಕಿಲೋಮೀಟರ್ ಸುರಂಗ ನಿರ್ಮಾಣದ ಪ್ರಗತಿಯೊಂದಿಗೆ ಮುಂಬೈ - ಅಹಮದಾಬಾದ್ ಬುಲೆಟ್ ರೈಲು ಯೋಜನೆಯು, ಪ್ರಮುಖ ಮೈಲಿಗಲ್ಲು ಸಾಧಿಸಿದೆ ಎಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ. ಮಹಾರಾಷ್ಟ್ರದ ಪಾಲ್ಘರ್‌ನಲ್ಲಿ ನಡೆದ ಹೈ-ಸ್ಪೀಡ್ ಸುರಂಗ ಬ್ರೇಕ್‌ಥ್ರೂ ಕಾರ್ಯಕ್ರಮವನ್ನು ಇಂದು ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ಉದ್ದೇಶಿಸಿ ಮಾತನಾಡಿದ ಸಚಿವರು,

ಈ ಯೋಜನೆಯಲ್ಲಿ ಒಟ್ಟು ಏಳು ಪರ್ವತ ಸುರಂಗಗಳು ಮತ್ತು ಒಂದು ಸಮುದ್ರ ಸುರಂಗವಿದೆ ಎಂದು ತಿಳಿಸಿದ್ದಾರೆ. ಇದು ಮಹಾರಾಷ್ಟ್ರದಲ್ಲಿ ಎರಡನೇ ಪರ್ವತ ಸುರಂಗವಾಗಿದೆ. ಬುಲೆಟ್ ರೈಲು ಮಧ್ಯಮ ವರ್ಗದವರಿಗೆ ಕೈಗೆಟುಕುವ ಮತ್ತು ಅನುಕೂಲಕರ ಸಾರಿಗೆ ವಿಧಾನವಾಗಿ ಕಾರ್ಯನಿರ್ವಹಿಸುತ್ತದೆ ಎಂದು ಸಚಿವರು ಹೇಳಿದ್ದಾರೆ. ೫೦೮ ಕಿಲೋಮೀಟರ್ ಉದ್ದದ ಹೈಸ್ಪೀಡ್ ರೈಲು ಕಾರಿಡಾರ್ ಒಟ್ಟು ೧೨ ನಿಲ್ದಾಣಗಳನ್ನು ಹೊಂದಿರುತ್ತದೆ ಎಂದು ಅವರು ಹೇಳಿದರು. ಈ ಕಾರಿಡಾರ್ ಸಬರಮತಿ, ಅಹಮದಾಬಾದ್, ಆನಂದ್, ವಡೋದರಾ, ಭರೂಚ್, ಸೂರತ್, ಬಿಲಿಮೋರಾ, ವಾಪಿ, ಬೋಯಿಸರ್, ವಿರಾರ್, ಥಾಣೆ ಮತ್ತು ಮುಂಬೈ ಸೇರಿದಂತೆ ಪ್ರಮುಖ ನಗರಗಳನ್ನು ಸಂಪರ್ಕಿಸುತ್ತದೆ ಎಂದು ಮಾಹಿತಿ ನೀಡಿದರು.

ಧ್ವನಿ: ಕೇಂದ್ರ ರೈಲ್ವೆ ಅಶ್ವಿನಿ ವೈಷ್ಣವ್

*********

೨೦೨೫ ಭಾರತದ ಅಭಿವೃದ್ಧಿ ಪಯಣದಲ್ಲಿ ಅತ್ಯಂತ ನಿರ್ಣಾಯಕ ವರ್ಷವಾಗಿದೆ. ಈ ವರ್ಷ ಹಲವು ನೀತಿಗಳು ಪ್ರಗತಿಯಾಗಿ ಮತ್ತು ಉದ್ದೇಶಗಳು ಪರಿಣಾಮವಾಗಿ ಪರಿವರ್ತನೆಗೊಂಡ ವರ್ಷವಾಗಿದೆ. ಆಕಾಶವಾಣಿ ಪ್ರಸ್ತುತಪಡಿಸುತ್ತಿರುವ 'ಸುಧಾರಣೆಗಳ ವರ್ಷ' ಸರಣಿಯಲ್ಲಿ ಇಂದು ೨೦೨೫ರಲ್ಲಿ ತಂತ್ರಜ್ಞಾನ ವಲಯದಲ್ಲಿ ಆಗಿರುವ ಭಾರತದ ಪ್ರಗತಿಯನ್ನು ಪ್ರಮುಖವಾಗಿ ಪ್ರಸ್ತುತಪಡಿಸಲಾಗುತ್ತಿದೆ.

ಈ ಕುರಿತು ಒಂದು ವರದಿ:

*********

ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ-ಎಸ್ಐಆರ್ ಗೆ ಸಂಬಂಧಿಸಿದಂತೆ ಪಶ್ಚಿಮ ಬಂಗಾಳ ಸರ್ಕಾರ, ೨೦೧೦ ರ ನಂತರ ನೀಡಿದ ಇತರ ಹಿಂದುಳಿದ ವರ್ಗ-ಒಬಿಸಿ ಪ್ರಮಾಣಪತ್ರಗಳನ್ನು, ಕರಡು ಮತದಾರರ ಪಟ್ಟಿಗೆ ಹಕ್ಕುಗಳು ಮತ್ತು ಆಕ್ಷೇಪಣೆಗಳ ಮೇಲಿನ ವಿಚಾರಣೆಗಳ ಸಮಯದಲ್ಲಿ ಪೋಷಕ ಗುರುತಿನ ದಾಖಲೆಗಳಾಗಿ ಪರಿಗಣಿಸಲಾಗುವುದಿಲ್ಲ ಎಂದು ಭಾರತೀಯ ಚುನಾವಣಾ ಆಯೋಗ ನಿರ್ದೇಶನ ನೀಡಿದೆ.  ಕಳೆದ ಡಿಸೆಂಬರ್ ೨೪ ರಂದು ಕಲ್ಕತ್ತಾ ಹೈಕೋರ್ಟ್ ೨೦೧೦ ಮತ್ತು ೨೦೨೪ ರ ನಡುವೆ ೧೧೩ ಸಮುದಾಯಗಳಿಗೆ ನೀಡಲಾದ ಒಬಿಸಿ ಪ್ರಮಾಣಪತ್ರಗಳನ್ನು ರದ್ದುಗೊಳಿಸಿ ಹೊರಡಿಸಲಾದ ಆದೇಶದ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ.

*********

೧೧ನೇ ಭಾರತ ಅಂತಾರಾಷ್ಟ್ರೀಯ ಯುವ ನೌಕಾಯಾನ ಚಾಂಪಿಯನ್‌ಶಿಪ್ ೨೦೨೬, ಚೆನ್ನೈನಲ್ಲಿ ನಿನ್ನೆ ಔಪಚಾರಿಕವಾಗಿ ಉದ್ಘಾಟನೆಗೊಂಡಿದ್ದು, ಇದೇ ೪ ರಿಂದ ೧೦ ರವರೆಗೆ ಚೆನ್ನೈ ಬಂದರಿನಲ್ಲಿ ನಡೆಯಲಿದೆ. ಇದು ಭಾರತದ ಅತ್ಯಂತ ದೀರ್ಘಾವಧಿಯ ಮತ್ತು ಸ್ಥಿರವಾದ ಅಂತಾರಾಷ್ಟ್ರೀಯ ಯುವ ನೌಕಾಯಾನ ಸ್ಪರ್ಧೆಯಾಗಿದೆ. ಚಾಂಪಿಯನ್‌ಶಿಪ್‌ನಲ್ಲಿ ೧೩ ರಾಷ್ಟ್ರಗಳ ೧೧೭ ನೋಂದಾಯಿತ ನಾವಿಕರು ಐದು ಯುವ ವರ್ಗಗಳಲ್ಲಿ ಸ್ಪರ್ಧಿಸಲಿದ್ದಾರೆ.